- -

ಅಸಲು ದಾವೆ ಸಂಖ್ಯೆ - 334/2012
ಡಿ.ಡಬ್ಲ್ಯೂ - 01
ದಿನಾಂಕಃ 31-01-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ</u>**

ವಾದಿಯರು ನಿಮ್ಮ ಓಣಿಯವರು ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಯ ರಸ್ತೆಯ ಪಶ್ಚಿಮಕ್ಕೆ ನಿಮ್ಮ ಆಸ್ತಿ ಇದೆ ಎಂದರೆ ಸರಿಯಲ್ಲ. ದಾವೆ ಹೂಡುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ನೀವು ಮನೆಯನ್ನು ಕಟ್ಟುತಿದ್ದೀರಿ ಎಂದರೆ ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ನೀವುಗಳು ನಿಡಿ-8 ರಲ್ಲಿ ತೋರಿಸಿದ ಹಾಗೆ ಪ್ಲಿಂತ್ ಏರಿಯಾವರೆಗೆ ಮನೆಯನ್ನು ಕಟ್ಟುತಿದ್ದೀರಿ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಸರಿ ಎಂದು ನುಡಿಯುತ್ತಾರೆ. ಪ್ಲಿಂತ್ ಏರಿಯಾದ ಪಶ್ಚಿಮಕ್ಕೆ ನಿಮ್ಮ ಮತ್ತೊಂದು ಮನೆ ಇದೆ ಎಂದರೆ ಸರಿ.ಮುಂದುವರೆದು ಈ ಮನೆಯು ಕಟ್ಟುವುದು ಸ್ಥಗಿತಗೊಂಡಿದ್ದರಿಂದ ಪಶ್ಚಿಮ ದಿಕ್ಕಿನಲ್ಲಿಇರುವ ನಮ್ಮ ಆಸ್ತಿಯಲ್ಲಿ ಮತ್ತೊಂದು ಮನೆಯನ್ನು ಕಟ್ಟಿರುತ್ತೇವೆ.

ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಮನೆಯ ಪೂರ್ವಕ್ಕೆ 33 ಅಡಿ ಅಗಲದ ರಸ್ತೆ ಇತ್ತು ಎಂದರೆ ಸರಿಯಲ್ಲ. ನಿಡಿ- 10 ರಲ್ಲಿ ತೊರಿಸಿದ ಭಾವ ಚಿತ್ರದಲ್ಲಿ 33 ಅಡಿ ಅಗಲದ ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೀವು ಪ್ಲಿಂತ್ ವರೆಗೆ ಮನೆ ಕಟ್ಟಿದ್ದರಿಂದ ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಬಾರದು ಎಂದು ವಾದಿಯರು ಪುರಸಭೆಗೆ ತಕರಾರನ್ನು ನೀಡಿದ್ದರು ಎಂದರೆ ಸರಿ. ಮುಂದುವರೆದು ನಾವು ಮನೆ ಕಟ್ಟಲು ಪರವಾನಿಗೆ ಪಡೆದುಕೊಂಡಿರುತ್ತೇವೆ. ಪುರಸಭೆಗೆ ತಕರಾರನ್ನು ನೀಡಿದ್ದರು ಸಹ ನೀವು ಮನೆಯನ್ನು ಕಟ್ಟುತ್ತಿದ್ದ ಸಲುವಾಗಿ ವಾದಿಯರು ನಿಮ್ಮ ವಿರುದ್ಧ ಪಿರ್ಯಾಧಿಯನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದ ನಿಡಿ- 1 ರಲ್ಲಿ ನಿಮ್ಮ ಮತ್ತು ಮಸದಿ ಜಾಗದ ನಡುವೆ 33 ಅಡಿ ಅಗಲದ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ಜಾಗವು ಮಸದಿಗೆ ಸೇರಿದ ಜಾಗ ಆಗಿರುತ್ತದೆ. ನಿಮ್ಮ ಮನೆ ಮತ್ತು ಮಸದಿಯ ನಡುವೆ 33 ಅಡಿ ಅಗಲದ ರಸ್ತೆ ಇದ್ದು, ಸದರಿ ರಸ್ತೆಯನ್ನು ಅತೀಕ್ರಮಣ ಮಾಡಿ ಅಲ್ಲಿ ಪ್ಲಿಂತ್ ವರಗೆ ಮನೆಯನ್ನು ಕಟ್ಟಿರುತ್ತೀರಿ ಎಂದರೆ ಸರಿಯಲ್ಲ. ಈ ವಿಷಯವಾಗಿ ನಿಮ್ಮ

ವಿರುದ್ಧ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ತಡಯಾಜ್ಞೆಯನ್ನು ಪ್ರಶ್ನೀಸಿ ನೀವು ಹಾವೇರಿ ನ್ಯಾಯಾಲಯದಲ್ಲಿ ಮೇಲ್ಮಮನವಿ ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ಮೇಲ್ಮಮನವಿಯು ವಜಾ ಗೊಂಡಿರುತ್ತದೆ ಎಂದರೆ ಸರಿ.

ಸಾಕ್ಷಿಗೆ ನಿಮ್ಮ ಮನೆಯ ದಕ್ಷಿಣ ದಿಕ್ಕಿನಿಂದ ಪೂರ್ವಕ್ಕೆ ಕೂಡಲು ಒಂದು ದಾರಿ ಇದೆ ಎಂದರೆ ನಮ್ಮ ಮನೆಯಿಂದ 5 ಪೂಟು ವಾದಿಯ ಮನೆಯಿಂದ 5 ಪೂಟು ಬಿಟ್ಟು ದಕ್ಷಿಣದ ಕಡೆಗೆ ಒಟ್ಟು 10 ಪೂಟು ಅಗಲದ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು ಪೂರ್ವ - ಪಶ್ಚಿಮಕ್ಕೆ ಕೂಡುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಪೂರ್ವ - ಪಶ್ಚಿಮಕ್ಕೆ ಇರುತ್ತದೆಯೋ ಅಥವಾ ಉತ್ತರ-ದಕ್ಷಿಣಕ್ಕೆ ಹೊಂದಿಕೊಂಡು ಇರುತ್ತೆದೆಯೋ ಎಂದರೆ ಪಶ್ಚಿಮಕ್ಕೆ ಮಾತ್ರ ಇರುತ್ತದೆ.

ನಿಮ್ಮ ಆಸ್ತಿಯು ಹೇಗೆ ಪಡೆದುಕೊಂಡಿರುತ್ತೀರಿ ಎಂದರೆ, ಖರೀದಿ ಮುಖಾಂತರ ಪಡೆದುಕೊಂಡಿರುತ್ತೇನೆ. ನಾನು 3ಗುಂಟೆ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಖರೀದಿ ಪತ್ರವನ್ನು ಹಾಜರುಪಡಿಸಿದ್ದೇನೆ. 1992 ರಲ್ಲಿ ಖರೀದಿ ಮಾಡಿದ್ದು ನಂತರ 24 ಪೂಟು ನ್ನು ಸಹ ನೀವೇ ತೆಗೆದುಕೊಳ್ಳಿ ಎಂದು ಅಂದಿನ ಮಾರಾಟಗಾರರು ನುಡಿದಿದ್ದರಿಂದ ಸದರಿ 24 ಪೂಟನ್ನು ಸಹ ನನ್ನ ಹೆಸರಿನಲ್ಲಿ ಖಾತೆ ಮಾಡಿಸಿ ಕೊಂಡಿರುತ್ತೇನೆ. ಸದರಿ 24 ಪೂಟನ್ನು ಖರೀದಿ ಮಾಡದೇ ಇದ್ದರು ಸಹ ಖೊಟ್ಟಿಯಾಗಿ ಪುರಸಭೆಯಲ್ಲಿ ಖಾತೆ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸಾರ್ವಜನಿಕ ರಸ್ತೆಯನ್ನು ಮಾರಾಟ ಮಾಡಲು ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿ.

ನಿಮ್ಮ ಇರತಕ್ಕ ಮನೆಯು ನೀವು ಖರೀದಿಸಿದ ಆಸ್ತಿಗೆ ಸಂಬಂಧಪಟ್ಟಿದ್ದಲ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವಕ್ಕೆ ದಾವಾ ಆಸ್ತಿ, ಪಶ್ಚಿಮಕ್ಕೆ 1 ನೇ ವಾದಿಯ ಮನೆ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಗಲ್ಲಿ ಇರುತ್ತದೆ. ನೀವು ಹೇಳಿದ ಚಕ್ಕಬಂದಿಗೆ ಸಂಬಂಧಟಪ್ಪ ಖರೀದಿ ಪತ್ರ ನಿಡಿ-4 ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯು ದಂಡಿನ ಪೇಟೆ ಓಣಿ, ವಾರ್ಡ ನಂ. 8 ರಲ್ಲಿ ಬರುತ್ತದೆ. ನೀವು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟುವಾಗ ವಾದಿಯರು ತಹಶೀಲ್ದಾರ ಸವಣೂರ ರವರಿಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ತಹಶೀಲ್ದಾರ ಸವಣೂರು ಪರಿಶೀಲಿಸಿ ನಿಮ್ಮ ಸಮಕ್ಷಮ ರಸ್ತೆ ಇದೆ ಎಂದು ನಿಪಿ-1 ರಂತೆ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಸಾರ್ವಜನಿಕ ರಸ್ತೆಯಲ್ಲಿ ಮನೆಯನ್ನು ಕಟ್ಟುತಿದ್ದೀರಿ ಎಂದು ತಹಶೀಲ್ದಾರ ಸವಣೂರ ಅವರು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

3 ಗುಂಟೆ ಆಸ್ತಿಯನ್ನು ಖರೀದಿಸಿದ ಖರೀದಿ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಖರೀದಿ ಪತ್ರ ನಿಮ್ಮ ಬಳಿ ಇಲ್ಲ ಎಂದರೆ ಸರಿ. 24 ಪೂಟು ರಲ್ಲಿ ಕಟ್ಟುತಿದ್ದ ಮನೆಗೆ ಯಾವುದೇ ಖರೀದಿ ಪತ್ರ ಇಲ್ಲ ಎಂದರೆ ಸರಿ. ನೀವು ಯಾವುದೇ ಖರೀದಿ ಪತ್ರ ಇಲ್ಲದೆ ಇದ್ದರು ಸಹ ಪುರಸಭೆಯಲ್ಲಿ ಖೊಟ್ಟಿ ದಾಖಲೆ ಸೃಷ್ಠಿಸಿ ಕೊಂಡು ಉತಾರವನ್ನು ನಿಮ್ಮ ಹೆಸರಿಗೆ ಬರೆಯಿಸಿ ಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಪರವಾನಿಗೆಯನ್ನು ಪಡೆದು ಕಟ್ಟುತ್ತೀರುವ ಮನೆಯು ಖರೀದಿ ಪತ್ರದ ಆಧಾರದ ಮೇಲೆ ಪರವಾನಿಗೆ ಪಡೆದು ಕಟ್ಟುತ್ತಿದ್ದೀರಿ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ ಇರುವ ನಿಮ್ಮ ಮನೆಯನ್ನು ಕಟ್ಟಲು ನಿಡಿ-4 ನ ಖರೀದಿ ಪತ್ರದ ಆಧಾರದ ಮೇಲೆ ಕಟ್ಟುರುತ್ತೀರಿ ಎಂದರೆ ಸರಿ. ನಿಡಿ-4 ಖರೀದಿಪತ್ರ ನೀವು ವಾಸ ಮಾಡುವ ಮನೆಗೂ ಮತ್ತು ದಾವಾ ಆಸ್ತಿಗೂ ಸಂಬಂಧ ಪಟ್ಟಿದ್ದಲ್ಲ ಎಂದರೆ ಸರಿಯಲ್ಲ. 33 ಅಗಲದ ರಸ್ತೆ ಇದ್ದರೂ ಸಹ ಮತ್ತು ಸಾರ್ವಜನಿಕ ರಸ್ತೆಯನ್ನು ಕಬಳಿಸುವ ಉದ್ದೇಶದಿಂದ ಮನೆಯನ್ನು ಕಟ್ಟಿರುತ್ತೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮೂಲಕ ಬೈಕ, ಟ್ರಾಕ್ಟರ ಮತ್ತು ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿಯಲ್ಲ. ಸಾರ್ವಜನಿಕರು ಓಡಾಡುವುದಕ್ಕೆ ಹಕರತ್ತು ಮಾಡುತ್ತಾ, ತೊಂದರೆ ಕೊಡುತ್ತೀರುತ್ತೀರಿ ಎಂದರೆ ಸರಿಯಲ್ಲ. ನೀವು ಪ್ಲಿಂತ್ ಹಾಕಿರುವುದಕ್ಕೆ ರಸ್ತೆ ಬಂದ ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ರಸ್ತೆಯಲ್ಲಿ ಪ್ಲಿಂತ್ ಹಾಕಿದ್ದಕ್ಕೆ ಸಾರ್ವಜನಿಕರು ಸುಮಾರು 1 ಕಿ ಮಿ ನಷ್ಟು ಸುತ್ತುವರೆದು ಓಡಾಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಪ್ಲಿಂತ್ ಹಾಕಿರುವುದಕ್ಕೆ ಸಾರ್ಜಜನಿಕರು ಓಡಾಡುತ್ತೀಲ್ಲ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ಜಾಗದಲ್ಲಿ ನಾವು ಪ್ಲಿಂತ ನ್ನು ಹಾಕಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಟ್ಟಂತೆ ಯಾವುದೇ ಅಧಿಕೃತ ದಾಖಲೆಗಳು ನಿಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆ ಉತಾರ ಇರುತ್ತದೆ. ಪುರಸಭೆ ಯವರು ಕೂಡಾ ಮನೆ ಕಟ್ಟುವುದು ಬೇಡ ಎಂದು ನಿಮಗೆ ನೋಟಿಸ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಆಸ್ತಿ ನಂ. 338/30 ಇತ್ತು, ಈಗ ನನ್ನ ಹೆಂಡತಿ ಸದರಿ ಆಸ್ತಿಯನ್ನು ಬಿಟ್ಟು ಕೊಟ್ಟಿದ್ದರಿಂದ ಆಸ್ತಿ ನಂ. 338/30/1 ಆಗಿರುತ್ತದೆ. ನೀವು ಹರಕತ್ತ ಮಾಡಿದ್ದರಿಂದ ವಾದಿಯರು ದಿನಾಂಕಃ 04-07-2011 ಕ್ಕೆ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ ಮತ್ತು ಮುಖ್ಯಾಧಿಕಾರಿಗಳು ಪುರಸಭೆ, ರವರಿಗೆ ನಿಪಿ-5 ರಿಂದ 7 ರಂತೆ ತಕರಾರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ತಕರಾರನ್ನು ನೀಡಿರುವುದಕ್ಕೆ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ ಮತ್ತು ಮುಖ್ಯಾಧಿಕಾರಿಗಳು ಪುರಸಭೆ ರವರು ನಿಮಗೆ ಮನೆ ಕಟ್ಟ ಬಾರದು ಎಂದು ತಾಕೀತು

ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಸದರಿ ಪ್ಲಿಂತ್ ಏರಿಯಾವನ್ನು ದುಟಾಯಿತನಿಂದ ಕಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇಲ್ಲದಿದ್ದರು ಸಹ ದುಟಾಯಿತನದಿಂದ ಬುನಾದಿ ಹಾಕಿ ಪ್ಲಿಂತ ವರೆಗೂ ಕಟ್ಟಿರುತ್ತೀರಿ ಎಂದರೆ ಸರಿಯಲ್ಲ. ನೀವು ಪ್ಲಿಂತ್ ವರೆಗೆ ಕಟ್ಟಿದ್ದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಇರುವ ರಸ್ತೆಯು ಪೂರ್ವಕ್ಕೆ ಕೂಡುತ್ತದೆ ಎಂದರೆ ಸರಿಯಲ್ಲ. ಪೂರ್ವದ ರಸ್ತೆಯು ಮುಂದೆ ಹೋಗಿ ಪಾಳಾ ಬಾದಾಮಿ ರಸ್ತೆಗೆ ಹೊಂದಿಕೊಳ್ಳುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಪಾಳಾಬಾದಾಮಿ ಕೂಡುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಅಲ್ಲಿ ರಸ್ತೆಯೇ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಿಂದ ಪಾಳಾಬಾದಾಮಿ ರಸ್ತೆಗೆ ಎಷ್ಟು ದೂರು ಇದೆ ಎಂದರೆ ದಾರಿಯೇ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮನೆಯಿಂದಪಾಳಾಬಾದಾಮಿ ರಸ್ತೆಗೆ ಎಷ್ಟು ದೂರ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. 200 ಅಡಿ ಅಂತರದಲ್ಲಿ ಇದೆ ಎಂದರೆ ಸರಿಯಲ್ಲ.

ನೀವು ರಸ್ತೆಯನ್ನು ಕಬಳಿಸಿದ್ದು ಅದನ್ನು ಸಮರ್ಥಿಸುವ ಸಲುವಾಗಿ ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಸಾಕ್ಷಿಯನ್ನು ನುಡಿಯತ್ತೀದ್ದೀರಿ ಎಂದರೆ ಸರಿಯಲ್ಲ. ಸುಳ್ಳು ದಾಖಲೆಯನ್ನು ನಿಡಿ ಪುರಸಭೆ ರವರಿಂದ ಮನೆ ಕಟ್ಟುವ ಪರವಾನಿಗೆ ಪತ್ರವನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಖರೀದಿ ಪತ್ರಕ್ಕೂ ಮತ್ತು ಪರವಾನಿಗೆ ನೀಡಿದ ಆಸ್ತಿಯ ಚಕ್ಕಬಂದಿಗೂ ಹೊಂದುವುದಿಲ್ಲ ಎಂದರೆ ಸರಿಯಲ್ಲ. ದಂಡಿನ ಪೇಟೆ ಓಣಿ ಬಹಳ ದೊಡ್ಡದಾಗಿದೆ ಎಂದರೆ ಸರಿ. ದಂಡಿನ ಪೇಟೆ ಏರಿಯಾದಲ್ಲಿ ಸಾವಿರಾರು ಮನೆ ಇದೆ ಎಂದರೆ ಸರಿಯಲ್ಲ. ಸದರಿ ದಂಡಿನ ಪೇಟೆ ಏರಿಯಾದ ಸಾರ್ವಜನಿಕರಿಗೆ ತೊಂದರೆ ಕೊಡುವ ಸಲುವಾರಿ ರಸ್ತೆಯನ್ನು ಕಬಳಿಸಿ ಪ್ಲಿಂತ್ ವರೆಗೆ ಕಟ್ಟಿರುತ್ತೀರಿ ಎಂದರೆ ಸರಿಯಲ್ಲ.

ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ ಖರೀದಿ ಪತ್ರ ಮತ್ತು ಪರವಾನಿಗೆ ಪತ್ರವು ಖೊಟ್ಟಿಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ದಾವಾ ಸಂಬಂಧಪಟ್ಟಿದ್ದಲ ಎಂದರೆ ಸರಿಯಲ್ಲ. ಸರ್ಕಾರಿ ರಸ್ತೆಯನ್ನು ನೀವೇನೂ ಖರೀದಿ ಮಾಡಿಲ್ಲ ಎಂದರೆ ಸರಿ. ರಸ್ತೆಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ದಾಖಲೆ ಸೃಷ್ಠಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

OS No.334/2012 DW.1

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.